**ದಿನಾಂಕಃ 21.01.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಶ್ರೀ ಕೆ ಎನ್ ಆರ್., ವಾದಿ ಪರ ವಕೀಲರಿಂದ**

**2.** ನಾನು ಪಿಯುಸಿಯವರೆಗೆ ವ್ಯಾಸಂಗ ಮಾಡಿದ್ದೇನೆ. ನನ್ನ ಗಂಡ 9 ನೇ ಪ್ರತಿವಾದಿ ನಾರಾಯಣಗೌಡ ಪದವಿ ಮುಗಿಸಿರುತ್ತಾರೆ ಎಂದರೆ ಸರಿ. ನನ್ನ ಮೈದುನಾರಾದ 10 ಮತ್ತು 11 ನೇ ಪ್ರತಿವಾದಿಗಳಾದ ಅಪ್ಪೆಗೌಡ ಹಾಗೂ ಸೋಮೇಗೌಡ ರವರು ವಿದ್ಯಾಂವಂತರು ಎಂದರೆ ಸರಿ. ಈ ದಿನ ನನ್ನ ಗಂಡ ನ್ಯಾಯಾಲಯದಲ್ಲಿ ಕುಳಿತಿರುತ್ತಾರೆ ಎಂದರೆ ಸರಿ. ಸಾಕ್ಷಿಯೂ ಮುಂದುವರೆದು ಅವರಿಗೆ ಆರೋಗ್ಯ ಸರಿಯಿಲ್ಲ ಎಂದು ನುಡಿಯುತ್ತಾರೆ. ನನ್ನ ಗಂಡ ಮೊದಲಿನಿಂದಲೂ ನ್ಯಾಯಾಲಯಕ್ಕೆ ಹಾಜರು ಇದ್ದಾರೆ ಎಂದರೆ ಸಾಕ್ಷಿಯೂ ಅವರಿಗೆ ಪಾಶ್ವವಾಯು ಆಗಿದ್ದು ಅವರು ಮಾತಾನಾಡಲು ತೊದಲುತ್ತಾರೆ ಎಂದು ನುಡಿಯುತ್ತಾರೆ. ಈ ದಾವೆಯನ್ನು ವಾದಿಯವರು ವಿಭಾಗ ಕೋರಿ ದಾಖಲಿಸಿರುತ್ತಾರೆ.

**3.** ಪಟೇಲ್ ರಾಮೇಗೌಡ ಅಂದರೆ ನನ್ನ ಮಾವ ಅಂದರೆ ನನ್ನ ಗಂಡನ ತಂದೆ ಎಂದರೆ ಸರಿ. ರಾಮಕ್ಕ ಎಂದರೆ ಪಟೇಲ್ ರಾಮೇಗೌಡ ರವರ ತಾಯಿ ಅಂದರೆ ನಾರಾಯಣಗೌಡ ರವರಿಗೆ ಅಜ್ಜಿಯಾಗಬೇಕು.

**4.** ವಾದಿಯವರು ವೆಂಕಟಸ್ವಾಮಿ ಮಕ್ಕಳು ಎಂದರೆ ಸಾಕ್ಷಿಯೂ ದಾವೆ ಹಾಕಿದ ನಂತರ ಗೊತ್ತಾಗಿದೆ ಎಂದು ನುಡಿಯುತ್ತಾರೆ. ಒಬ್ಬ ಜೋಗಿ ಪೆದ್ದರಾಮಪ್ಪನಿಗೆ ಒಟ್ಟು 6 ಜನ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ಅವರುಗಳೆಂದರೆ ಮುನಿಶಾಮಿ, ಚಿಕ್ಕರಾಮಪ್ಪ, ವೆಂಕಟಸ್ವಾಮಿ, ವೆಂಕಟಪ್ಪ, ವೆಂಕಟಮ್ಮ ಹಾಗೂ ನಾರಾಯಣಮ್ಮ ಎಂದರೆ ನನಗೆ ಗೊತ್ತಿಲ್ಲ. ಚಿಕ್ಕರಾಮಪ್ಪ, ವೆಂಕಟಪ್ಪ ಹಾಗೂ ವೆಂಕಟಮ್ಮನಿಗೆ ಮಕ್ಕಳು ಇಲ್ಲದೇ ತೀರಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಮುನಿಶಾಮಿಗೆ ದೊಡ್ಡ ರಾಮಪ್ಪ ಹಾಗೂ ಚಿಕ್ಕವೆಂಕಟರಾಮಪ್ಪ ಇಬ್ಬರೂ ಮಕ್ಕಳು ಎಂದರೆ ಗೊತ್ತಿಲ್ಲ. ವೆಂಕಟಸ್ವಾಮಿಗೆ ರಾಮಪ್ಪ, ರವಣಪ್ಪ, ಗಂಗಪ್ಪ ಮತ್ತು ಆದೇಮ್ಮ ಇವರು ಮಕ್ಕಳಾಗಿದ್ದು ಅವರ ಪೈಕಿ ಆದೇಮ್ಮ ತೀರಿಕೊಂಡಿದ್ದು ಉಳಿದವರೇ ದಾವೆಯ ವಾದಿಗಳು ಎಂದರೆ ಸರಿಯಲ್ಲ. ನಾರಾಯಣಮ್ಮನಿಗೆ ಗೋವಿಂದಪ್ಪ ಮತ್ತು ಶ್ರೀರಾಮಪ್ಪ ಎಂಬ ಇಬ್ಬರು ಮಕ್ಕಳು ಎಂದರೆ ನನಗೆ ಗೊತ್ತಿಲ್ಲ.

**5.** 1 ನೇ ದಾವಾ ಆಸ್ತಿಯಾದ ಸರ್ವೇ ನಂ. 3/1 ರ 7 ಎಕರೆ 13 ಗುಂಟೆ ಜಮೀನು ಗೋಣಿಗುಪ್ಪ ಗ್ರಾಮದಲ್ಲಿರುತ್ತದೆ. ಸರ್ವೇ ನಂ. 3/1 ರಲ್ಲಿ 1 ಎಕರೆ 38 ಗುಂಟೆ ಜಮೀನು ಮೂಲತಃ ಜೋಗಿ ವೆಂಕಟಸ್ವಾಮಿಗೆ ಸೇರಿತ್ತು ಎಂದರೆ ಸರಿ ಆದರೆ ನನ್ನ ಮಾವ ಪಟೇಲ್ ರಾಮೆಗೌಡ ರವರಿಗೆ ಕ್ರಯವಾಗಿರುತ್ತದೆ ಎಂದು ನುಡಿಯುತ್ತಾರೆ. ವಾದಿಯವರು ಜೋಗಿ ವೆಂಕಟಸ್ವಾಮಿ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. 1 ಎಕರೆ 38 ಗುಂಟೆ ಜಮೀನಿಗೆ ಜೋಗಿ ವೆಂಕಟಸ್ವಾಮಿಗೆ ಸೇರಿತ್ತು ಎಂದು ತೋರಿಸಲು ದಾಖಲೆಗಳನ್ನು ನೀಡಿರುತ್ತೇನೆ.

**6.** ಜೋಗಿ ವೆಂಕಟಸ್ವಾಮಿಗೆ 1 ಎಕರೆ 38 ಗುಂಟೆ ಜಮೀನು ಮಾಲೀಕನಾಗಿರಲಿಲ್ಲ ಆದರೆ ಅದು ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿಯಲ್ಲ. ಕ್ರಯ ಆಗುವ ಕಾಲಕ್ಕೆ 1 ಎಕರೆ 38 ಗುಂಟೆ ಜಮೀನು ಜೋಗಿ ವೆಂಕಟರಾಮಪ್ಪ ಅಂದರೆ ಜೋಗಿ ವೆಂಕಟಸ್ವಾಮಿ ಯ ಅಣ್ಣನ ಮಗನ ಹೆಸರಿನಲ್ಲಿತ್ತು ಎಂದರೆ ಸರಿಯಲ್ಲ. ಆದ್ದರಿಂದ ಜೋಗಿ ವೆಂಕಟಸ್ವಾಮಿಗೆ ಮಾರಾಟ ಮಾಡುವ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ಸದರಿ 1 ಎಕರೆ 38 ಗುಂಟೆ ಜಮೀನನ್ನು ಕಬಳಿಸುವ ದೃಷ್ಟಿಯಿಂದ ನನ್ನ ಮಾವ ಪಟೇಲ್ ರಾಮೇಗೌಡ 1962 ನೇ ಇಸವಿಯಲ್ಲಿ ಕ್ರಯ ಪತ್ರವನ್ನು ಸೃಷ್ಟಿ ಮಾಡಿದ್ದಾರೆ ಎಂದರೆ ಸರಿಯಲ್ಲ.

**7.** ವೆಂಕಟರಾಮಪ್ಪ ಬಿನ್ ಮುನಿಶಾಮಪ್ಪ ರವರು ಗೊತ್ತಾ ಎಂದರೆ ಸಾಕ್ಷಿಯೂ ಅವರೇ ನಮಗೆ ಮಾರಾಟ ಮಾಡಿರುವುದು ಎಂದು ನುಡಿಯುತ್ತಾರೆ. ವೆಂಕಟರಾಮಪ್ಪ ಬಿನ್ ಮುನಿಶಾಮಪ್ಪ ರವರು ನಮಗೆ ಸರ್ವೇ ನಂ. 7/13 ರಲ್ಲಿ 1 ಎಕರೆ 38 ಗುಂಟೆ ಹಾಗೂ ಅವರ ಅಣ್ಣ ತಮ್ಮಂದಿರು ಸರ್ವೇ ನಂ. 3/1 ರಲ್ಲಿ 6 ಎಕರೆ 38 ಗುಂಟೆ ಜಮೀನನ್ನು ಮಾರಾಟ ಮಾಡಿರುತ್ತಾರೆ. ಸರ್ವೇ ನಂ. 3/1 ರಲ್ಲಿ 6 ಎಕರೆ 38 ಗುಂಟೆ ಜಮೀನನ್ನು ನಮಗೆ 1971 ನೇ ಇಸವಿಯಲ್ಲಿ ಮಾರಾಟ ಮಾಡಿರುತ್ತಾರೆ. ನಾನು ಹೇಳುವಂತೆ ನಮಗೆ ಸರ್ವೇ ನಂ. 3/1 ರಲ್ಲಿ 6 ಎಕರೆ 38 ಗುಂಟೆ ಜಮೀನನ್ನು 1971 ನೇ ಇಸವಿಯಲ್ಲಿ ಮಾರಾಟ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯವಿಚಾರಣೆ ಪ್ರಮಾಣ ಪತ್ರದಲ್ಲಿ ಸರ್ವೇ ನಂ. 3/1 ರಲ್ಲಿ 7 ಎಕರೆ 13 ಗುಂಟೆ ಜಮೀನನ್ನು ಮಾರಾಟ ಮಾಡಿರುವುದಾಗಿ ಹೇಳಿ ಬರೆಸಿರುತ್ತೇನೆಂದರೆ ಸರಿ. ಮಾರಾಟ ಮಾಡಿದ ಸಂದರ್ಭದಲ್ಲಿ ಮಾರಾಟಗಾರರಿಗೆ ಮಾರಾಟ ಮಾಡುವ ಹಕ್ಕು ಇತ್ತು ಎಂದು ತೋರಿಸಲು ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ. ನಾನು

ಹೇಳುವಂತೆ ನನ್ನ ಮಾವ ಸರ್ವೇ ನಂ. 3/1 ರಲ್ಲಿ 1 ಎಕರೆ 30 ಗುಂಟೆ ಹಾಗೂ ಸರ್ವೇ ನಂ. 7/13 ರಲ್ಲಿ 6 ಎಕರೆ 38 ಗುಂಟೆ ಜಮೀನನ್ನು ಖರೀದಿಸಿಲ್ಲ ಆದರೆ ವಾದಿಯವರಿಗೆ ಮೋಸ ಮಾಡಿ ಸದರಿ ಕ್ರಯ ಪತ್ರಗಳನ್ನು ಸೃಷ್ಟಿ ಮಾಡಿಕೊಳ್ಳಲಾಗಿದೆ ಎಂದರೆ ಸರಿಯಲ್ಲ.

**8.** ನಮಗೆ ಮಾರಾಟ ಮಾಡಲಾಗಿದೆ ಎಂದು ಹೇಳುವ ಜಮೀನುಗಳು ವಾದಿಯವರ ಪಿತ್ರಾರ್ಜಿತ ಜಮೀನುಗಳಾಗಿದ್ದು ಅವುಗಳನ್ನು ಮಾರಾಟ ಮಾಡಲು ಮಾರಾಟಗಾರರಿಗೆ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ವಿಭಾಗ ಮಾಡಿಕೊಂಡೇ ನಮಗೆ ಮಾರಾಟ ಮಾಡಿರುತ್ತಾರೆ. ವಿಭಾಗ ಆಗಿರುವುದನ್ನು ತೋರಿಸಲು ದಾಖಲೆಗಳನ್ನು ನೀಡಿರುವುದಿಲ್ಲ.

**9.** ಸರ್ವೇ ನಂ. 5 ರಲ್ಲಿ ಎಷ್ಟು ಎಕರೆ ಜಮೀನು ಇರುತ್ತದೆ ಎಂದರೆ ಸಾಕ್ಷಿಯೂ ಒಟ್ಟು ವಿಸ್ತೀರ್ಣದಲ್ಲಿ, ನನ್ನ ಮಾವ ಅವರ ತಾಯಿ ರಾಮಕ್ಕ ರವರ ಹೆಸರಿಗೆ 2 ಎಕರೆ ಜಮೀನನ್ನು ಕ್ರಯ ಮಾಡಿಸಿಕೊಂಡು ತದನಂತರ ಪಟೇಲ್ ರಾಮೇಗೌಡ ಅಂದರೆ ನನ್ನ ಮಾವನಿಗೆ ಖಾತೆ ಬಂದಿದ್ದು, ಅವರು ತೀರಿಕೊಂಡ ನಂತರ ನನ್ನ ಗಂಡನ ಹೆಸರಿಗೆ ಖಾತೆಯಾಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ 2 ಎಕರೆ ಜಮೀನನ್ನು ಕಾಮಟ್ಟಂ ಗೋವಿಂದಪ್ಪ ರವರಿಂದ 1958 ನೇ ಇಸವಿಯಲ್ಲಿ ಖರೀದಿಸಲಾಗಿದೆ. ಈ ಮೊದಲು ಸರ್ವೇ ನಂ. 5 ರಲ್ಲಿ ಒಟ್ಟು 9 ಎಕರೆ 32 ಗುಂಟೆ ಜಮೀನನ್ನು ಕಾಮಟ್ಟಂ ಗೋವಿಂದಪ್ಪನಿಂದ ಮುನಿಸ್ವಾಮಿ, ವೆಂಕಟಸ್ವಾಮಿ, ಚಿಕ್ಕರಾಮಪ್ಪ ಹಾಗೂ ವೆಂಕಟಪ್ಪ ಇವರು ಖರೀದಿಸಿದ್ದರು ಎಂದರೆ ಸಾಕ್ಷಿಯೂ ಮೇಲಿನ 4 ಜನ ರವರಿಂದ ಕಾಮಟ್ಟಂ ಗೋವಿಂದಪ್ಪ ಖರೀದಿಸಿರುವುದು ಎಂದು ನುಡಿಯುತ್ತಾರೆ.

**10.** ನನ್ನ ಮಾವ ಪಟೇಲ್ ರಾಮೆಗೌಡ ವೆಂಕಟಸ್ವಾಮಿ ರವರು ಕಾಮಟ್ಟಂ ಗೋವಿಂದಪ್ಪ ರವರಿಗೆ ಕೇವಲ 2 ಎಕರೆ ಜಮೀನನ್ನು ಖರೀದಿಸಿರುತ್ತಾರೆ. ದಿ. 14.02.1948 ರಂದು ಕಾಮಟ್ಟಂ ಗೋವಿಂದಪ್ಪ ರವರು ವಾದಿಯವರ ತಂದೆ ವೆಂಕಟಸ್ವಾಮಿ, ಮುನಿಸ್ವಾಮಿ, ಚಿಕ್ಕರಾಮಪ್ಪ ಹಾಗೂ ವೆಂಕಟಪ್ಪ ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಇದುವರೆಗೂ ವಾದಿಯವರ ಕುಟುಂಬದ ನಡುವೆ ಯಾವುದೇ ವಿಭಾಗ ಆಗಿಲ್ಲದೇ ಇದ್ದರೂ

ನಾನು ಸುಳ್ಳು ಹೇಳುತ್ತಿದ್ದನೆಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ: ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇಳಿ ಕೇಳಿ ಸರಿ ಇದೆ.

(ಗೌಡ ಜಗದೀಶ ರುದ್ರೆ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಮುಳಬಾಗಿಲು.